**ಅಧಿಸೂಚನೆ ದಿನಾಂಕ: 05.07.2023**

# ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ ಅಧಿಸೂಚನೆ

**2023-24 ನೇ ಸಾಲಿಗೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ಗಳ 4 ವರ್ಷದ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕಾಗಿ ಆನ್‌ಲೈನ್ www.kea.kar.nic.in ಮೂಲಕ ಅರ್ಜಿ ಅಹ್ವಾನಿಸಲಾಗಿದೆ.**

## 1) ಜಿಟಿಟಿಸಿ ಕಿರು ಪರಿಚಯ:

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಒಂದು ಉನ್ನತ ಮಟ್ಟದ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿದೆ. ಇದು 1972 ರಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿ ಮೊದಲ ಬಾರಿಗೆ ಡೆನ್ಮಾರ್ಕ್ ಸರ್ಕಾರದ ಸಹಯೋಗದೊಂದಿಗೆ ಸ್ಥಾಪಿಸಲ್ಪಟ್ಟು ಇಂದು ರಾಜ್ಯಾದ್ಯಂತ 30 ಡಿಪ್ಲೋಮಾ ಕಾಲೇಜುಗಳನ್ನು ಹೊಂದಿದೆ. ಜಿಟಿಟಿಸಿಯ ಉದ್ದೇಶ ಪ್ರಸ್ತುತ ಮತ್ತು ಹೊಸ ಕೈಗಾರಿಕೆಗಳಿಗೆ ಕೌಶಲ್ಯಭರಿತ ಮಾನವ ಸಂಪನ್ಮೂಲವನ್ನು ಒದಗಿಸುವುದು. ಜಿಟಿಟಿಸಿ ಸಂಸ್ಥೆಯ ಡಿಪ್ಲೋಮಾ ಕೋರ್ಸುಗಳು AICTE ಯಿಂದ ಅನುಮೋದನೆ ಪಡೆದಿರುತ್ತವೆ. ಪಠ್ಯಕ್ರಮವು ಕೇವಲ ಕ್ಲಾಸ್‌ರೂಮ್‌ಗೆ ಮಾತ್ರ ಸೀಮಿತವಾಗದೇ ಪ್ರಾಯೋಗಿಕ ಕಲಿಕೆಗೆ ಹೆಚ್ಚು ಒತ್ತು ನೀಡುವುದರಿಂದ ಜಿಟಿಟಿಸಿ ಡಿಪ್ಲೋಮಾದಾರರಿಗೆ ಕೈಗಾರಿಕೆಗಳಲ್ಲಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉತ್ತಮ ಬೇಡಿಕೆಯಿದೆ. ಸಂಸ್ಥೆಯು ಜಿಟಿಟಿಸಿ ಕಾಲೇಜುಗಳಲ್ಲಿ ಅತ್ಯಾಧುನಿಕ ಲ್ಯಾಬ್ ಸೌಲಭ್ಯಗಳಾದ ಹೈಸ್ಪೀಡ್ 3 ಆಕ್ಸಿಸ್ ಸಿಎನ್‌ಸಿ ಮಷೀನ್, CNC ಲೇಥ್, CNC ಟರ್ನರ್, ಮಿಲ್ಲರ್, ವೈರ್ EDM, ಡಿಸೈನ್ ಅನಾಲೈಸಿಸ್, ಪ್ರಿಶಿಸನ್ ಮ್ಯಾನುಫ್ಯಾಕ್ಚರಿಂಗ್, ಅಟೋಮೇಶನ್ ರೊಬೊಟಿಕ್ಸ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್‌ಗೆ ಸಂಬಂಧಪಟ್ಟ ಸುಸಜ್ಜಿತ ಪ್ರಯೋಗಾಲಯಗಳು ಇವೆ.

## 2) ಜಿಟಿಟಿಸಿಯ ಡಿಪ್ಲೋಮಾ ಕೋರ್ಸುಗಳ ವಿವರ:

**AICTE ಅನುಮೋದಿತ ಡಿಪ್ಲೋಮಾ ಕೋರ್ಸುಗಳು**

| ಕೋರ್ಸ್ ಹೆಸರು | ವಿದ್ಯಾರ್ಹತೆ | ಅವಧಿ (ವರ್ಷಗಳಲ್ಲಿ) | ಕೇಂದ್ರಗಳು |
|---|---|---|---|
| ಡಿಪ್ಲೋಮಾ ಇನ್ ಟೂಲ್ & ಡೈ ಮೇಕಿಂಗ್ (DTDM) | 10ನೇ ತರಗತಿ | 3+1* | ರಾಜ್ಯದ ಎಲ್ಲಾ ಜಿಟಿಟಿಸಿ ಡಿಪ್ಲೋಮಾ ಕಾಲೇಜುಗಳು |
| ಡಿಪ್ಲೋಮಾ ಇನ್ ಪ್ರಿಶಿಸನ್ ಮ್ಯಾನುಫ್ಯಾಕ್ಚರಿಂಗ್ (DPM) | 10ನೇ ತರಗತಿ | 3+1* | ಬೆಳಗಾವಿ, ಕಲಬುರಗಿ, ಮಂಗಳೂರು |
| ಡಿಪ್ಲೋಮಾ ಇನ್ ಮೆಕ್ಯಾಟ್ರಾನಿಕ್ಸ್ (DMCH) | 10ನೇ ತರಗತಿ | 3+1* | ಗೌರಿಬಿದನೂರು, ಚಿಕ್ಕೋಡಿ, ಗೋಕಾಕ, ಉಡುಪಿ, ಚಿತ್ರದುರ್ಗ, ಚಳ್ಳಕೆರೆ, ಕೊಪ್ಪಳ, ಯಾದಗಿರಿ, ಮಾಗಡಿ, ದೇವನಹಳ್ಳಿ |
| ಡಿಪ್ಲೋಮಾ ಇನ್ ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ (DEE) | 10ನೇ ತರಗತಿ | 3+1* | ಮಾಗಡಿ ಮತ್ತು ದೇವನಹಳ್ಳಿ |
| ಡಿಪ್ಲೋಮಾ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ & ಮಶೀನ್ ಲರ್ನಿಂಗ್ (DAI&ML) | 10ನೇ ತರಗತಿ | 3+1* | ಮಾಗಡಿ ಮತ್ತು ದೇವನಹಳ್ಳಿ |
| ಡಿಪ್ಲೋಮಾ ಇನ್ ಅಟೋಮೇಶನ್ & ರೋಬೊಟಿಕ್ಸ್ (DAR) | 10ನೇ ತರಗತಿ | 3+1* | ಬೆಳಗಾವಿ ಮತ್ತು ಹರಿಹರ |

***ಕಡ್ಡಾಯ ಒಂದು ವರ್ಷದ ಇಂಟರ್ನಶಿಪ್ ತರಬೇತಿ**

**ಜಿಟಿಟಿಸಿ 3+1* ವರ್ಷಗಳ ವಿಶೇಷತೆ**: GTTC ಯಲ್ಲಿ 3 ವರ್ಷಗಳ ತರಬೇತಿಯನ್ನು ಪೂರ್ಣಗೊಳಿಸಿದ ನಂತರ, ವಿದ್ಯಾರ್ಥಿಗಳನ್ನು ಅವರ ಪ್ರಾಯೋಗಿಕ ಜ್ಞಾನ ಹಾಗೂ ಕೌಶಲ್ಯವನ್ನು ಹೆಚ್ಚಿಸಲು ಒಂದು ವರ್ಷದ ಅವಧಿಗೆ ದೇಶಾದ್ಯಂತ ಸಂಬಂಧಿತ ಉದ್ಯಮಗಳಿಗೆ ಕಡ್ಡಾಯವಾಗಿ ಇನ್-ಪ್ಲಾಂಟ್ ತರಬೇತಿಗಾಗಿ ನಿಯೋಜಿಸಲಾಗುವುದು. ತರಬೇತಿ ಪಡೆದ ವಿದ್ಯಾರ್ಥಿಗಳು ವಿನ್ಯಾಸ, ಪ್ರಕ್ರಿಯೆ ಯೋಜನೆ, ಉತ್ಪಾದನಾ ತಂತ್ರಗಳು, ತಪಾಸಣೆ ವಿಧಾನಗಳು ಇತ್ಯಾದಿ ಕೌಶಲ್ಯಗಳನ್ನು ಪಡೆದುಕೊಳ್ಳುತ್ತಾರೆ. ಅವರು ಈ ವಿಷಯಗಳಿಗೆ ಸಂಬಂಧಿಸಿದ ಯೋಜನೆಯನ್ನು (Project Work) ಕೈಗೆತ್ತಿಕೊಂಡು, ತರಬೇತಿಯ ಕೊನೆಯಲ್ಲಿ ವರದಿ ಮಾಡಿ ಸಲ್ಲಿಸಲು ಸೂಚಿಸಲಾಗಿದೆ. ಅವರ ತರಬೇತಿ ಅವಧಿಯಲ್ಲಿ, ತರಬೇತುದಾರರಿಗೆ ಮಾಸಿಕ ಸ್ಟೈಫಂಡ್ ಅನ್ನು ಪಾವತಿಸಲಾಗುತ್ತದೆ, ಅದರೊಂದಿಗೆ ಅನೇಕ ವಿದ್ಯಾರ್ಥಿಗಳು ಕೋರ್ಸ್ ಮುಗಿದ ನಂತರ ಶಾಶ್ವತ ಉದ್ಯೋಗಿ ಆಗಿ ಮುಂದುವರಿಯುತ್ತಾರೆ. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿಗಳು ದೇಶ ಮತ್ತು ವಿದೇಶದ ಕೈಗಾರಿಕೆಗಳಲ್ಲಿ ಉದ್ಯೋಗಕ್ಕೆ ಅರ್ಹರಾಗುತ್ತಾರೆ.

### 3) ಅರ್ಜಿಗಳನ್ನು ಸಲ್ಲಿಸಲು ಸೂಚನೆಗಳು:

(I) ಅಭ್ಯರ್ಥಿಗಳು 2023ನೇ ಸಾಲಿನ ಜಿಟಿಟಿಸಿ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು.

(II) ಅರ್ಜಿ ಸಲ್ಲಿಸುವ ಮಾಹಿತಿಯನ್ನು www.kea.kar.nic.in ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು

(III) ಕೆಇಎ ವೆಬ್‌ಸೈಟ್ www.kea.kar.nic.in ನಲ್ಲಿ ಒದಗಿಸಿರುವ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಿ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಆನ್‌ಲೈನ್ ಅರ್ಜಿ ಕುರಿತ ಪೂರ್ಣ ಮಾಹಿತಿಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ಒದಗಿಸಲಾಗಿದೆ.

(IV) ಕೆಇಎ ವೆಬ್‌ಸೈಟ್ www.kea.kar.nic.in ನಲ್ಲಿ ನೀಡಿರುವ ಸೂಚನೆಗಳನ್ನು ಅಭ್ಯರ್ಥಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳ ರ್ಜಿಗಳನ್ನು ಅನರ್ಹಗೊಳಿಸಲಾಗುವುದು.

(V) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನ ಸ್ಕ್ಯಾನ್ ಮಾಡಿರುವ ಇತ್ತೀಚಿನ ಭಾವಚಿತ್ರ ಮತ್ತು ಎಸ್‌ಎಸ್‌ಎಲ್ ಸಿ ಅಂಕಪಟ್ಟಿ ತಮ್ಮೊಂದಿಗೆ ಇಟ್ಟುಕೊಂಡಿರಬೇಕು.

(VI) ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮೊಬೈಲ್ ಫೋನ್ ಸಂಖ್ಯೆ, ಇ-ಮೇಲ್ ವಿಳಾಸ, ಅಭ್ಯರ್ಥಿಯದೇ ಆಗಿರಬೇಕು, ಏಕೆಂದರೆ ಜಿಟಿಟಿಸಿ/ ಕೆಇಎಯಿಂದ ತುರ್ತು ಸಂದsÀರ್ಭಗಳಲ್ಲಿ ಯಾವುದೇ ಮಾಹಿತಿ/ ವಿಷಯಗಳನ್ನು ಇವುಗಳ ಮುಖಾಂತರವೇ ಎಸ್‌ಎಂಎಸ್ ಅಥವಾ ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ;

(VII) ಆನ್‌ಲೈನ್ ಅರ್ಜಿಯಲ್ಲಿ ತಪ್ಪು ಮೊಬೈಲ್ ಸಂಖ್ಯೆ ಅಥವಾ ತಪ್ಪು ಇ-ಮೇಲ್ ವಿಳಾಸ ನೀಡಿದ ಕಾರಣದಿಂದ ಯಾವುದೇ ಮಾಹಿತಿ ತಲುಪದಿದ್ದಲ್ಲಿ ಅದಕ್ಕೆ ಅಭ್ಯರ್ಥಿಗಳೇ ಪೂರ್ಣ ಹೊಣೆಗಾರರಾಗುತ್ತಾರೆ.

(VIII) ಅಂತಿಮ ಸುತ್ತಿನ ಸೀಟು ಹಂಚಿಕೆ ಪೂರ್ಣಗೊಳ್ಳುವರೆಗೂ ಅಭ್ಯರ್ಥಿಗಳು ಇತ್ತೀಚಿನ ಮಾಹಿತಿ/ವಿಷಯಗಳಿಗೆ ಕೆಇಎ www.kea.kar.nic.in ನೊಂದಿಗೆ ಸದಾ ಸಂಪರ್ಕದಲ್ಲಿರಬೇಕು.

(IX) ಗ್ರಾಮೀಣ ಮೀಸಲಾತಿಯಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ (ಬಿಇಒ) ಧೃಡೀಕರಿಸಲ್ಪಟ್ಟ ಹತ್ತು (10) ವರ್ಷದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(X) ಕಲ್ಯಾಣ ಕರ್ನಾಟಕ ಮೀಸಲಾತಿಯಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು, ಕೆಕೆಆರ್ (KKR) ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(XI) ದಾಖಲಾತಿ ಪರಿಶೀಲನೆಗಾಗಿ ಅಭ್ಯರ್ಥಿಗಳು ಮೂಲ ದಾಖಲೆಗಳು ಹಾಗೂ ಎರಡು(2) ನಕಲು ಪ್ರತಿಗಳೊಂದಿಗೆ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ಜಿಟಿಟಿಸಿ ಪರಿಶೀಲನಾ ಕೇಂದ್ರಕ್ಕೆ ಹಾಜರಾಗುವುದು. ಅಭ್ಯರ್ಥಿಗಳು ತಮ್ಮ ಪಾಲಕರ/ಪೋಷಕರ ಜೊತೆ ಸ್ವಂತ ವೆಚ್ಚದಲ್ಲಿ ಹಾಜರಾಗತಕ್ಕದ್ದು.

(XII) ದಾಖಲಾತಿ ಪರಿಶೀಲನೆ ನಂತರ ಅಭ್ಯರ್ಥಿಗಳಿಗೆ ಜಿಟಿಟಿಸಿ ಕೇಂದ್ರ & ಕೋರ್ಸ್ ಆದ್ಯತೆಯನ್ನು ದಾಖಲಿಸಲು ಆನ್‌ಲೈನ್‌ನಲ್ಲಿ ಸಕ್ರಿಯಗೊಳಿಸಲಾಗುವುದು.

(XIII) ಸೀಟು ಹಂಚಿಕೆಯಾದ ಕೇಂದ್ರಕ್ಕೆ ಅಭ್ಯರ್ಥಿಗಳು ಹಾಜರಾಗಿ ಶುಲ್ಕ ಪಾವತಿಸಿ ವರದಿ ಮಾಡಿಕೊಳ್ಳುವುದು.

4) **ಈ ಕೆಳಕಂಡ ಮೂಲ ದಾಖಲೆಗಳು ಹಾಗೂ ಅವುಗಳ 2 ಸೆಟ್ ನಕಲು ಪ್ರತಿಗಳೊಂದಿಗೆ ದಾಖಲೆ ಪರಿಶೀಲನೆ ಸಮಯದಲ್ಲಿ ಸಲ್ಲಿಸತಕ್ಕದ್ದು.**

(I) 10ನೇ ತರಗತಿ ಅಂಕಪಟ್ಟಿ
(II) ಜಾತಿ ಪ್ರಮಾಣ ಪತ್ರ
(III) ಆದಾಯ ಪ್ರಮಾಣ ಪತ್ರ
(IV) ಕರ್ನಾಟಕದಲ್ಲಿ ಕನಿಷ್ಠ 5 ವರ್ಷ ವ್ಯಾಸಂಗ ಮಾಡಿರುವ ಪ್ರಮಾಣಪತ್ರ
(V) ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ-ಕನಿಷ್ಠ ಹತ್ತು ವರ್ಷಗಳು. ಬಿಇಒ ಅವರಿಂದ ದೃಢೀಕರಿಸಿರಬೇಕು.
(VI) ಮೂಲ ವರ್ಗಾವಣೆ ಪತ್ರ
(VII) ನಡವಳಿಕೆ ಪ್ರಮಾಣ ಪತ್ರ
(VIII) ಆಧಾರ ಕಾರ್ಡ್ ಪ್ರತಿ
(IX) ಕೆ.ಕೆ.ಆರ್ (ಕಲ್ಯಾಣ ಕರ್ನಾಟಕ ಪ್ರಾಂತ್ಯ) ಪ್ರಮಾಣ ಪತ್ರ
(X) ಇತ್ತೀಚಿನ 4 ಪಾಸ್ಪೋರ್ಟ್ ಅಳತೆಯ ಭಾವಚಿತ್ರಗಳು ಮತ್ತು 4 ಸ್ಟಾಂಪ್ ಅಳತೆಯ ಭಾವಚಿತ್ರಗಳು

5) **ಪ್ರವೇಶಾತಿ ಮಾನದಂಡ:**

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅವರ ಮೂಲ ದಾಖಲಾತಿಗಳ ಪರಿಶೀಲನೆಯ ನಂತರ ಮೆರಿಟ್-ಕಮ್-ರೋಸ್ಟರ್ ಆಧಾರದ ಮೇಲೆ ಅಭ್ಯರ್ಥಿಗಳ ಮೊದಲನೇ ಸುತ್ತಿನ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ನಂತರ ಬಾಕಿ ಉಳಿದ ಸೀಟುಗಳನ್ನು ಎರಡನೇ ಸುತ್ತಿನಲ್ಲಿ ಮೆರಿಟ್-ಕಮ್-ರೋಸ್ಟರ್ ಆಧಾರದ ಮೇಲೆ ಸೀಟುಗಳ ಹಂಚಿಕೆಯನ್ನು ಮಾಡಲಾಗುವುದು. ಕೌನ್ಸಲಿಂಗ್ ಪ್ರಕ್ರಿಯೆಯು ಸಂಪೂರ್ಣವಾಗಿ ಆನ್‌ಲೈನ್ ಆಗಿದ್ದು ಅಭ್ಯರ್ಥಿಯು ಯಾವುದೇ ಜಿಟಿಟಿಸಿ ಕೇಂದ್ರಗಳಿಗೆ ಬೇಟಿ ನೀಡುವ ಅಗತ್ಯವಿರುವುದಿಲ್ಲ. ಸೀಟು ಹಂಚಿಕೆಯು ಅಭ್ಯರ್ಥಿಯು Option Entry ಸಮಯದಲ್ಲಿ ಆಯ್ದುಕೊಂಡಿರುವ ಕೋರ್ಸ್, ಕೇಂದ್ರ ಹಾಗೂ ಮೆರಿಟ್-ಕಮ್-ರೋಸ್ಟರ್ ಮೇಲೆ ಅವಲಂಬಿತವಾಗಿರುತ್ತದೆ. ಸೀಟ್ ಮ್ಯಾಟ್ರಿಕ್ಸ್ ಈ ಕೆಳಕಂಡಂತಿರುತ್ತದೆ.

## SEAT MATRIX

GOVERNMENT TOOL ROOM & TRAINING CENTRE

SEAT MATRIX FOR NON KALYANA KARNATAKA REGION CENTRES INTAKE : 30 STUDENTS

| | Category | G.M | CAT-I | II A | II B | III A | III B | SC | ST | Total |
|---|---|---|---|---|---|---|---|---|---|---|
| 1 | General | 6 | 1 | 1 | 1 | 1 | 1 | 1 | 1 | 13 |
| 2 | KKR General | 1 | 0 | 1 | 0 | 0 | 0 | 1 | 0 | 3 |
| 3 | Women General | 3 | 0 | 1 | 0 | 0 | 1 | 1 | 0 | 6 |
| 4 | KKR Women General | 0 | 0 | 0 | 0 | 0 | 0 | 0 | 0 | 0 |
| 5 | Rural | 3 | 0 | 1 | 0 | 0 | 0 | 1 | 0 | 5 |
| 6 | Women Rural | 1 | 0 | 1 | 0 | 0 | 0 | 1 | 0 | 3 |
| 7 | KKR Women Rural | 0 | 0 | 0 | 0 | 0 | 0 | 0 | 0 | 0 |
| 8 | KKR Rural | 0 | 0 | 0 | 0 | 0 | 0 | 0 | 0 | 0 |
| | Total | 14 | 1 | 5 | 1 | 1 | 2 | 5 | 1 | 30 |
| | | | | | | | | | | |

SEAT MATRIX FOR NON KALYANA KARNATAKA REGION CENTRES INTAKE : 50 STUDENTS

| | Category | G.M | CAT-I | II A | II B | III A | III B | SC | ST | Total |
|---|---|---|---|---|---|---|---|---|---|---|
| 1 | General | 12 | 1 | 3 | 1 | 1 | 2 | 3 | 2 | 25 |
| 2 | KKR General | 1 | 0 | 1 | 0 | 0 | 0 | 1 | 0 | 3 |
| 3 | Women General | 4 | 1 | 1 | 1 | 1 | 1 | 1 | 0 | 10 |
| 4 | KKR Women General | 1 | 0 | 0 | 0 | 0 | 0 | 0 | 0 | 1 |
| 5 | Rural | 5 | 0 | 1 | 0 | 0 | 0 | 1 | 0 | 7 |
| 6 | Women Rural | 2 | 0 | 1 | 0 | 0 | 0 | 1 | 0 | 4 |

| | | | | | | | | | | |
|---|---|---|---|---|---|---|---|---|---|---|
| 7 | KKR Women Rural | 0 | 0 | 0 | 0 | 0 | 0 | 0 | 0 | 0 |
| 8 | KKR Rural | 0 | 0 | 0 | 0 | 0 | 0 | 0 | 0 | 0 |
| | Total | 25 | 2 | 7 | 2 | 2 | 3 | 7 | 2 | 50 |

SEAT MATRIX FOR NON KALYANA KARNATAKA REGION CENTRES INTAKE : 60 STUDENTS

| | Category | G.M | CAT-I | II A | II B | III A | III B | SC | ST | Total |
|---|---|---|---|---|---|---|---|---|---|---|
| 1 | General | 15 | 1 | 4 | 1 | 1 | 2 | 4 | 1 | 29 |
| 2 | KKR General | 1 | 0 | 1 | 0 | 0 | 0 | 1 | 0 | 3 |
| 3 | Women General | 4 | 1 | 2 | 1 | 1 | 0 | 2 | 1 | 12 |
| 4 | KKR Women General | 1 | 0 | 0 | 0 | 0 | 0 | 0 | 0 | 1 |
| 5 | Rural | 6 | 1 | 1 | 0 | 0 | 1 | 1 | 0 | 10 |
| 6 | Women Rural | 2 | 0 | 1 | 0 | 0 | 0 | 1 | 0 | 4 |
| 7 | KKR Women Rural | 1 | 0 | 0 | 0 | 0 | 0 | 0 | 0 | 1 |
| 8 | KKR Rural | 0 | 0 | 0 | 0 | 0 | 0 | 0 | 0 | 0 |
| | Total | 30 | 3 | 9 | 2 | 2 | 3 | 9 | 2 | 60 |

* 8% seats are reserved for KKR candidates in NON KKR region GTTC centres.
* Provided that if sufficient number of eligible women candidates are not available, to the extent of thirty percent, the unfilled vacancies shall be filled by male candidates belonging to the same category.

Note: The fractions in % of allotmet of seats rounded off to 3 in Cat-1 to distribute 60 seats as per roster. However to distribute 60 seats for the academic year 2023-24,it is taken as 3 setas for Cat-1 and in the subsequent years it will be alloted in rotation basis to Cat II B and Cat IIIA. The example is explained in the below table.

| Category | Year | No.of Seats | Remarks |
|---|---|---|---|
| Cat-1 | 2023-24 | 3 | For Cat IIB and Cat IIIA, 2 seats each |
| Cat-IIB | 2024-25 | 3 | For Cat -1 and Cat IIIA ,2 seats each |
| Cat IIIA | 2025-26 | 3 | For Cat -1 and Cat IIB, 2 seats each |

| SEAT MATRIX FOR NON KALYANA KARNATAKA REGION CENTRES INTAKE : 75 STUDENTS | | | | | | | | | | |
|---|---|---|---|---|---|---|---|---|---|---|
| | Category | G.M | CAT-I | II A | II B | III A | III B | SC | ST | Total |
| 1 | General | 16 | 2 | 5 | 2 | 2 | 2 | 5 | 1 | 35 |
| 2 | KKR General | 2 | 0 | 1 | 0 | 0 | 0 | 1 | 0 | 4 |
| 3 | Women General | 7 | 1 | 2 | 1 | 1 | 1 | 2 | 1 | 16 |
| 4 | KKR Women General | 1 | 0 | 0 | 0 | 0 | 0 | 0 | 0 | 1 |
| 5 | Rural | 8 | 0 | 2 | 0 | 0 | 1 | 2 | 0 | 13 |
| 6 | Women Rural | 3 | 0 | 1 | 0 | 0 | 0 | 1 | 0 | 5 |
| 7 | KKR Women Rural | 1 | 0 | 0 | 0 | 0 | 0 | 0 | 0 | 1 |
| 8 | KKR Rural | 0 | 0 | 0 | 0 | 0 | 0 | 0 | 0 | 0 |
| | Total | 38 | 3 | 11 | 3 | 3 | 4 | 11 | 2 | 75 |

| SEAT MATRIX - FOR KALYANA KARNATAKA REGION CENTRES INTAKE : 60 STUDENTS | | | | | | | | | | |
|---|---|---|---|---|---|---|---|---|---|---|
| | Centre:Hospet, Humnabad,Lingasugur,Koppal,Yadgir,Kalaburagi | | | | | | | | | |
| | Category | G.M | CAT-I | II A | II B | III A | III B | SC | ST | Total |
| 1 | General | 3 | 1 | 1 | 1 | 1 | 1 | 1 | 1 | 10 |
| 2 | KKR General | 10 | 1 | 3 | 1 | 1 | 1 | 3 | 1 | 21 |
| 3 | Women General | 0 | 0 | 0 | 0 | 0 | 0 | 0 | 0 | 0 |
| 4 | KKR Women General | 8 | 1 | 2 | 0 | 0 | 1 | 2 | 0 | 14 |
| 5 | Rural | 1 | 0 | 1 | 0 | 0 | 0 | 1 | 0 | 3 |
| 6 | Women Rural | 1 | 0 | 1 | 0 | 0 | 0 | 1 | 0 | 3 |
| 7 | KKR Rural | 6 | 0 | 1 | 0 | 0 | 0 | 1 | 0 | 8 |
| 8 | KKR Women Rural | 1 | 0 | 0 | 0 | 0 | 0 | 0 | 0 | 0 |
| | Total | 30 | 3 | 9 | 2 | 2 | 3 | 9 | 2 | 60 |

Note: The fractions in % of allotmet of seats rounded off to 3 in Cat-1 to distribute 60 seats as per roster.However to distribute 60 seats for the academic year 2023-24,it is taken as 3 setas for Cat-1 and in the subsequent years it will be alloted in rotation basis to Cat II B and CatIIIA. The example is explained in the below table.

| Category | Year | No.of Seats | Remarks |
|---|---|---|---|
| Cat-1 | 2023-24 | 3 | For Cat IIB and Cat IIIA, 2 seats each |
| Cat-IIB | 2024-25 | 3 | For Cat -1 and Cat IIIA ,2 seats each |
| Cat IIIA | 2025-26 | 3 | For Cat -1 and Cat IIB, 2 seats each |

Note: *70% seats are reserved for KKR candidates in KKR region GTTC centres.

* Provided that if sufficient number of eligible women candidates are not available, to the extent of thirty percent, the unfilled vacancies shall be filled by male candidates belonging to the same category.

## 6. ಡಿಪ್ಲೋಮಾ ಕೋರ್ಸುಗಳ ಶುಲ್ಕಗಳ ವಿವರಗಳು:

ಪ್ರತಿ ಕೇಂದ್ರದ ತಾಣವನ್ನು ಆಧರಿಸಿ ವಿಭಿನ್ನವಾದ ಶುಲ್ಕ ಸ್ವರೂಪ ನಿಗದಿಪಡಿಸಲಾಗಿದ್ದು, ಈ ಕೆಳಕಂಡಂತೆ ಇರುತ್ತವೆ. (ನಗರಗಳು, ಜಿಲ್ಲಾ ಕೇಂದ್ರಗಳು ಮತ್ತು ತಾಲ್ಲೂಕುಗಳು)

| ಕೇಂದ್ರದ ಹೆಸರು | ಕೋರ್ಸ | ಬೋಧನಾ ಶುಲ್ಕ ಪ್ರತಿ ವರ್ಷಕ್ಕೆ | ಶುಲ್ಕ ಪಾವತಿ | |
|---|---|---|---|---|
| | | | ಮೊದಲ ಕಂತು | ಎರಡನೇ ಕಂತು |
| ಮಂಗಳೂರು, ಕಲಬುರಗಿ | ಟೂಲ್ & ಡೈ ಮೇಕಿಂಗ್, ಪ್ರಿಶಿಸನ್ ಮ್ಯಾನುಫ್ಯಾಕ್ಚರಿಂಗ್ | Rs. 27500.00 | Rs. 13750.00 | Rs. 13750.00 |
| ಬೆಳಗಾವಿ | ಟೂಲ್ & ಡೈ ಮೇಕಿಂಗ್, ಪ್ರಿಶಿಸನ್ ಮ್ಯಾನುಫ್ಯಾಕ್ಚರಿಂಗ್ ಅಟೋಮೇಶನ್ & ರೋಬೋಟಿಕ್ಸ್ | Rs. 27500.00 | Rs. 13750.00 | Rs. 13750.00 |
| ತುಮಕೂರು, ಶಿವಮೊಗ್ಗ, ಹಾಸನ | ಟೂಲ್ & ಡೈ ಮೇಕಿಂಗ್, | Rs. 27500.00 | Rs. 13750.00 | Rs. 13750.00 |
| ಚಿತ್ರದುರ್ಗ | ಟೂಲ್ & ಡೈ ಮೇಕಿಂಗ್, ಮೆಕ್ಯಾಟ್ರಾನಿಕ್ಸ್ | Rs. 25000.00 | Rs. 12500.00 | Rs. 12500.00 |
| ಕೋಲಾರ | ಟೂಲ್ & ಡೈ ಮೇಕಿಂಗ್, | Rs. 25000.00 | Rs. 12500.00 | Rs. 12500.00 |
| ಹರಿಹರ | ಟೂಲ್ & ಡೈ ಮೇಕಿಂಗ್, ಅಟೋಮೇಶನ್ & ರೋಬೋಟಿಕ್ಸ್ | Rs. 24200.00 | Rs. 12100.00 | Rs. 12100.00 |
| ಗುಂಡ್ಲುಪೇಟೆ, ಕೂಡಲಸಂಗಮ, ದಾಂಡೇಲಿ | ಟೂಲ್ & ಡೈ ಮೇಕಿಂಗ್, | Rs. 24200.00 | Rs. 12100.00 | Rs. 12100.00 |
| ಗೋಕಾಕ | ಟೂಲ್ & ಡೈ ಮೇಕಿಂಗ್, ಮೆಕ್ಯಾಟ್ರಾನಿಕ್ಸ್ | Rs. 24200.00 | Rs. 12100.00 | Rs. 12100.00 |
| ಕನಕಪುರ, ಕಡೂರು, ಹೊಸಪೇಟೆ, ಲಿಂಗಸುಗೂರು, ಹುಮನಾಬಾದ | ಟೂಲ್ & ಡೈ ಮೇಕಿಂಗ್ | Rs. 22000.00 | Rs. 11000.00 | Rs. 11000.00 |
| ಉಡುಪಿ, ಗೌರಿಬಿದನೂರು, ಚಿಕ್ಕೋಡಿ, ಕೊಪ್ಪಳ, ಯಾದಗಿರಿ, ಚಳ್ಳಕೆರೆ | ಟೂಲ್ & ಡೈ ಮೇಕಿಂಗ್, ಮೆಕ್ಯಾಟ್ರಾನಿಕ್ಸ್ | Rs. 22000.00 | Rs. 11000.00 | Rs. 11000.00 |
| ಮಾಗಡಿ, ದೇವನಹಳ್ಳಿ | ಟೂಲ್ & ಡೈ ಮೇಕಿಂಗ್, ಮೆಕ್ಯಾಟ್ರಾನಿಕ್ಸ್. ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್, ಆರ್ಟಿಫಿಶೀಲಯ್ ಇಂಟೆಲಜೆನ್ಸ್ & ಮಷೀನ್ ಲರ್ನಿಂಗ್ | Rs. 22000.00 | Rs. 11000.00 | Rs. 11000.00 |

**ಸೂಚನೆ: ಅರ್ಹ ವಿದ್ಯಾರ್ಥಿಗಳು ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ಇಲಾಖೆಗಳ ವತಿಯಿಂದ ಶಿಷ್ಯವೇತನವನ್ನು ಪಡೆಯಬಹುದು.**

**ಬೋಧನಾ ಶುಲ್ಕಗಳೊಂದಿಗೆ ಈ ಕೆಳಕಂಡ ಶುಲ್ಕಗಳು ಸಹ ಅನ್ವಯಿಸುತ್ತವೆ.**

| | | |
|---|---|---|
| **ಪ್ರವೇಶ ಶುಲ್ಕ** | : | ಪ್ರತಿ ವರ್ಷ ರೂ. 500/- |
| **ದಂಡ ಶುಲ್ಕ** | : | ಕಂತು ತಡ ಮಾಡಿದರೆ ದಂಡ ಶುಲ್ಕ ರೂ. 100/- ಪ್ರತಿ ವಾರ ಮತ್ತು ಪ್ರತಿ ಸೆಮೆಸ್ಟರ್ ರೂ. 600/- |
| **ಭದ್ರತಾ ಠೇವಣಿ** | : | ರೂ. 4000/- (ಒಮ್ಮೆ ಮಾತ್ರ) ಗಳನ್ನು ಪ್ರವೇಶದ ಸಮಯದಲ್ಲಿ ಪಾವತಿಸಬೇಕಾಗುತ್ತದೆ. ಅದನ್ನು ಸಂಸ್ಥೆಯಿಂದ ಬಿಟ್ಟು ಹೋಗುವ ಸಮಯದಲ್ಲಿ ಮರುಪಾವತಿಸಲಾಗುವುದು. |
| **ನಿರ್ವಹಣಾ ಶುಲ್ಕ** | : | ಪ್ರತಿ ವರ್ಷಕ್ಕೆ ಹಿಂದಿರುಗಿಸಲಾಗದ ರೂ. 3000/- ಗಳನ್ನು ಪ್ರವೇಶಾತಿ ಸಮಯದಲ್ಲಿ ಪಾವತಿಸುವುದು. |
| **ಸಂವಹನ ಕೌಶಲ್ಯ ಮತ್ತು ಸಾಫ್ಟಸ್ಕಿಲ್ ಶುಲ್ಕ** | : | ಪ್ರವೇಶದ ಸಮಯದಲ್ಲಿ ರೂ. 1500/- ಗಳನ್ನು (ಒಮ್ಮೆ ಮಾತ್ರ) ಪಾವತಿಸುವುದು. |
| **ಮಧ್ಯದಲ್ಲಿ ಕೋರ್ಸ್ ಬಿಟ್ಟರೆ** | : | ವಿದ್ಯಾರ್ಥಿಯು ಕೋರ್ಸ್ ಮುಂದುವರೆಸದಿದ್ದರೆ ಆಯಾ ಸೆಮೆಸ್ಟರ್‌ಗೆ ಸಂಬಂಧಿಸಿದ ಕೋರ್ಸ್ ಶುಲ್ಕ ಪಾವತಿಸಬೇಕು. |

**ಪರೀಕ್ಷೆ:**

| | | |
|---|---|---|
| **ಪರೀಕ್ಷಾ ಶುಲ್ಕ** | : | ಪ್ರತಿ ಸೆಮೆಸ್ಟರ್‌ಗೆ ರೂ. 1200/- |
| **ಅನುತ್ತೀರ್ಣರಾದ ಅಭ್ಯರ್ಥಿಗಳು** | : | ಪ್ರತಿ ವಿಷಯಕ್ಕೆ ರೂ. 300/- |
| **ಉತ್ತರ ಪತ್ರಿಕೆಯ ಮರು ಅಂಕ ಎಣಿಕೆ** | : | ಪ್ರತಿ ವಿಷಯಕ್ಕೆ ರೂ. 200/- |
| **ಉತ್ತರ ಪತ್ರಿಕೆಯ ಕೋರಿಕೆ** | : | ಥಿಯರಿ ವಿಷಯಕ್ಕೆ ರೂ. 300/-<br>ಡ್ರಾಯಿಂಗ್/ಡಿಸೈನ್ ವಿಷಯಕ್ಕೆ ರೂ. 400/- |
| **ಉತ್ತರ ಪತ್ರಿಕೆಯ ಮೌಲ್ಯ ಮಾಪನ** | : | ಪ್ರತಿ ವಿಷಯಕ್ಕೆ ರೂ. 1200/- |

**ಪ್ರವೇಶಾತಿ ವೇಳಾಪಟ್ಟಿ**

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1 | ಆನ್‌ಲೈನ್ ಅರ್ಜಿಗಳ ಸಲ್ಲಿಕೆಗೆ ಪ್ರಾರಂಭದ ದಿನಾಂಕ | 05.07.2023 |
| 2 | ಆನ್‌ಲೈನ್ ಅರ್ಜಿಗಳ ಸಲ್ಲಿಕೆಗೆ ಕೊನೆಯ ದಿನಾಂಕ | 18.07.2023 |
| 3 | ದಾಖಲಾತಿಗಳ ಪರಿಶೀಲನೆ ಮತ್ತು ಕೋರ್ಸ್ & ಕಾಲೇಜು Option ಎಂಟ್ರಿ | 20.07.2023 & 21.07.2023 |
| 4 | ಮೊದಲನೇ ಸುತ್ತಿನ ಸೀಟು ಹಂಚಿಕೆ | 24.07.2023 |
| 5 | ಎರಡನೇ ಸುತ್ತಿನ ಸೀಟು ಹಂಚಿಕೆ | 27.07.2023 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:

Helpline: 155267

Website: www.kea.kar.nic.in